RegaNo BG 155

Sri "SATYAVADI"
— DAILY —
MYSORE4
46 th Year

Protect the cow

— ೨೯ —

ಸತ್ಯವಾದಿ
SATYAVADI

ಸ್ಥಾಪಕರು— ಅಂತುನೆ ಸಿಂಸ್ಕೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

13—2—1962

ಪ ವ...ಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

91(2)

ಕೃಷ್ಣೇವ್ ಸಲಹೆ

ಜಿನೀವಾದಲ್ಲಿ ಮಾರ್ಚಿಯಲ್ಲಿ ನಡೆಯುವ ನಿಶ್ಶಸ್ತ್ರೀಕರಣ ಸಭೆಯಲ್ಲಿ ಹಿರಿಯ ನೆಂಟು ರಾಷ್ಟ್ರಗಳ ಅಧಿಪತಿಗಳು ಭಾಗವಹಿಸಬೇಕೆಂದು ರಷ್ಯಾದ ಪ್ರಧಾನಿ ಕೃಶ್ಚೆವ್ ರವರು ತಿಳಿಸಿದ್ದಾರೆ

ಹತೋಟಿಗಳು ಬೇಕು

ಹತೋಟಿಗಳು ಇರಬೇಕೆಂದು ಮದರಾಸಿನಲ್ಲಿ ಕಾಂಗ್ರೆಸು ಚುನಾವಣೆ ಭಾಷಣ ಮಾಡಿದಾಗ ಶ್ರೀ ಟಿ ಕೃಷ್ಣಮಾಚಾರಿಯವರು ತಿಳಿಸಿದರು.

ದೊಡ್ಡ ಸಮಸ್ಯೆ

ಅಧಿಕೃತ ಕಾಂಗ್ರೆಸು ಸ್ಪರ್ಧಿಗಳ ವಿರುದ್ಧ ನಿಂತಿರುವ ಬಂಡೆದ್ದ ಕಾಂಗ್ರೆಸಿನವರು ಮೈಸೂರು ರಾಜ್ಯದಲ್ಲಿ ಕಾಂಗ್ರೆಸಿಗೆ ಸವಾಲೆ ಆಗಿದ್ದಾರೆ

ಅಕ್ಕಿ ಕೊಡಿ

ತಟ್ಟಿಭತ್ತದ ಒದಲು ತವರಿಗೆ ಅಕ್ಕಿ ಕೊಡವಂತೆ ದಕ್ಷಿಣ ಭಾರತ ರೈಲ್ವೆ ಉದ್ಯೋಗಿಗಳ ಸಂಘದ ಜನರಲ್ ಕೌನ್ಸಿಲು ನಿರ್ಣಯ ಮಾಡಿದೆ ಎಂದು ವರದಿಯಾಗಿದೆ.

ಗುಂಪು ಕಲಹ ಕಾರಣ

ಬೆಂಗಳೂರಿಗೆ ನೀರು ಒದಗಿಸಲು ರೂ 30 ಕೋಟಿ ವೆಚ್ಚದ ಕಾವೇರಿಯೋಜನೆಗೆ ಅನಾದಾರಣೆ ತೋರಲು, ಕಾಂಗ್ರೆಸಿನವರಿಗೆ ಗುಂಪುಗಳೇ ಕಾರಣವೆಂದು ಬೆಂಗಳೂರಿನಲ್ಲಿ ಮಾಜಿ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ತಿಳಿಸಿದರು.

ಪ್ರೀತಿ ಸತ್ಯಾಗ್ರಹ

ಅಣು ಶಸ್ತ್ರಗಳ ನಾಶಕ್ಕೆ ಕಾರ್ಯನಿರತರಾಗುವ ಪರಿಗೆ ತಮ್ಮ ಗಂಡಂದಿರಿಂದ ಪ್ರೀತಿ ವಾಪಸು ಪಡೆಯಲು ಬ್ರಿಟನ್ನಿನ ಕ್ಷಮುಖರ ಪತ್ನಿಯರು ನಿರ್ಧರಿಸಿದ್ದಾರೆ

ಆಗಮನ

ಭಾರತಕ್ಕೆ ಮುಂದೆ ಸೇವನ್ನು ಕೊಡುವ ವಿಷಯದಲ್ಲಿ ಚರ್ಚಿಸಲು ಅಮೆರಿಕ ಸಾಲದ ಕಾರ್ಯಾಚರಣೆಯ ಪ್ರಧಾನ ಅಧಿಕಾರಿ ಜಾನ್ ಉಲ್ಟನ್ಸ್ಟಿ ದೆಹಲಿಗೆ ಆಗಮಿಸಿದರು.

ನೆಹರು ಟೀಕೆ

ಸ್ವತಂತ್ರ ಪಕ್ಷ ಬಹಳ ಕಡಿಮೆ ದರ್ಜೆಯದೆಂದು, ಅದನ್ನು ಎದುರಿಸುವಷ್ಟು ತಮ್ಮ ಘನತೆಗೆ ಕಡಿಮೆಯೆಂದು ಪಂ|| ನೆಹರು ಬರೋಡಾದಲ್ಲಿ ತಿಳಿಸಿದರು.

ಸ್ವಯಂಸೇವಕರು

ಪಶ್ಚಿಮ ಇರಿಯನ್ ವಿಮೋಚನೆಗೆ ಇಷ್ಟು ಸಾವಿರ ಇಂಡೋನೇಷಿಯಾ ಸ್ವಯಂ ಸೇವಕರು ತೆರಳಿದರೆಂದು ಜಕಾರ್ತ ವಾರ್ತೆ.

ನಿರಾಕರಣೆ

ಅಮೆರಿಕದ ಖಾಸಗಿ ಸಂಸ್ಥೆಗಳ ಆಹ್ವಾನದ ಮೇಲೆ ಅಮೆರಿಕಕ್ಕೆ ಭೇಟಿಕೊಡಲು ನನಗೆ ಯಾರಾದರಿ ಸಿಕ್ಕಿಲ್ಲ ಎಂದು ಕಟಾಂಗ ಅಧ್ಯಕ್ಷ ಮೋಯಿಸೆ ಹೊಂಬೆ ಎಲಿಜೆಬೆತ್‌ವಿಲೆಯಲ್ಲಿ ಪತ್ರಿಕೆಯವರಿಗೆ ತಿಳಿಸಿದರು.

ಕಾಂಗ್ರೆಸಿಗರಿಗೆ ಗಾಯ

ಅಂಕೋಲಾದಿಂದ ಪುಂಡಲ ಕಾಂಗ್ರೆಸ ಸಮಿತಿ ಅಧ್ಯಕ್ಷ ಶ್ರೀ ಕೆ ಎಂ ಎಸ್ ಎಲ್ಲಪ್ಪ ಮೊದಲಿಯಾರಿಂದನ್ನು ಸಮುದ್ರಾಯಂಪೆಟ್ಟಾಯಿನಲ್ಲಿ ಮೊನ್ನೆ ಯಾರೋ ಬಚ್ಚಲಿಗೆ ತಳ್ಳಿ ಪರಾರಿ ಆದರು. ಇವರನ್ನು ಅಂಕೋಲಾ ಸರ್ಕಾರಿ ಆಸ್ಪತ್ರೆಗೆ ಸೇರಿಸಿದೆ.

ಕಾರ್ಖಾನೆ ಸ್ಥಾಪನೆ

ಪಂಜಾಬಿನ ಮೋಗಾದಲ್ಲಿ ಕಂಡೆಸ್ ಮಿಲ್ಕ್ ಕಾರ್ಖಾನೆ ಸ್ಥಾಪಿಸಲಾಗಿಯಿತು.

ಖಂಡನೆ

ಸ್ವತಂತ್ರ ಪಕ್ಷದ ನಾಯಕರಾದ ಶ್ರೀ ಸಿ ರಾಜಗೋಪಾಲಾಚಾರಿಯವರು ಮದರಾಸಿನಲ್ಲಿ ಚುನಾವಣೆ ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತಾ, ಸರ್ಕಾರಿ ನೌಕರರು ಚುನಾವಣೆ ಸಭೆಗಳಲ್ಲಿ ಭಾಗವಹಿಸಕೂಡದೆಂದು ಸರ್ಕಾರ ಮಾಡಿರುವ ಆಜ್ಞೆ ಖಂಡನೀಯ ಎಂದರು.

ಸ್ವಾತಂತ್ರ್ಯ ಹೆಚ್ಚಬೇಕು

ಜನತೆಯು ಸ್ವಾತಂತ್ರ್ಯ ಹೆಚ್ಚಬೇಕು ಸರ್ಕಾರಿಂದ ಅಧಿಕಾರ ಕಡಿಮೆ ಆಗಬೇಕು ಎಂದು ಹಿರಿಯ ಗಾಂಧಿವಾದಿ ಮೊನ್ನೆ ರಾಜಾಜಿಯವರು ತಿಳಿಸಿದರು.

——

ಮೈಸೂರು ಅಭಿನವ ಶಂಕರಾಲಯದಲ್ಲಿ ನಿನ್ನೆ ಮಧ್ಯಾಹ್ನ ಪೂರ್ಣಾಹುತಿ ಕಾರ್ಯಕ್ರಮವು ವಿಧಿವತ್ತಾಗಿ ನೆರವೇರಿತು.

oo

ಪಾರ್ಲಿಮೆಂಟ್ ಸದಸ್ಯ ಶ್ರೀ ಟಿ ಟಿ. ಕೃಷ್ಣಮಾಚಾರಿಯವರು ತಿರುಚಿರಾಪಳ್ಳಿಯಲ್ಲಿ ಮೊನ್ನೆ ಭಾಷಣಮಾಡುತ್ತಾ ಶ್ರೀ ಇ ವಿ ರಾಮಸ್ವಾಮಿ ನಾಯಕರ ಪ್ರಚಾರದಿಂದ ದಾರಿ ತಪ್ಪದಿರಬೇಕೆಂದು ನುಡಿದರು ಬ್ರಾಹ್ಮಣರು ಒಟ್ಟುಗೂಡಿದಿರುವಂತೆ ನಾಯಕರು ತಿಳಿಸಿದ್ದರು

oo

ಅಧ್ಯಕ್ಷ ಕೆನೆಡಿಯವರ ವಿಶೇಷ ಅಸಿಸ್ಟೆಂಟರಾದ ಶ್ಲೆಸ್ಸಿಂಗರ್, ಹೇಳಿಕೆಯನ್ನಿತ್ತು, ವಿಶ್ವದ ನಾಯಕತ್ವಕ್ಕೆ ಭಾರತ ಪ್ರತಿಸ್ಪರ್ಧಿಯಾಗಿರುವದು ಚೀನಕ್ಕೆ ಭಯವನ್ನುಂಟು ಮಾಡಿದೆ ಎಂದರು

oo

ಸೆಕೆಂಡರಿ ಶಾಲೆಗಳ ಶಿಕ್ಷಕರಿಗೆ ಒಂದೆ ಮಟ್ಟದ ವೇತನ ಇರಬೇಕೆಂದು ಹೈದರಾಬಾದಿನಲ್ಲಿ ಸೇರಿದ್ದ ಅಖಿಲ ಭಾರತ ಸೆಕೆಂಡರಿ ಶಿಕ್ಷಕರ ಸಂಘದ ಕಾರ್ಯಕಾರಿ ಸಮಿತಿ ನಿರ್ಣಯಿಸಿದೆ

ವಿವಿಧ ವಿಷಯಗಳು

ಶಿವಮೊಗ್ಗಾ ವುರಸಭೆಯು 240 ಹಸಕಸಗುಡಿಸುವವರು ಮುಷ್ಕರ ಮಾಡಿರುವದು ಅಕ್ರಮವೆಂದು ಪೌರಸಭಾಧ್ಯಕ್ಷ ಶ್ರೀ ಎಂ ಸಿ ಮಹೇಶ್ವರಪ್ಪನವರು ತಿಳಿಸಿದರು ಬೇರೆ ಕಡೆಯಿಂದ ಕಸಗುಡಿಸುವವರನ್ನು ಕರೆಸುವದಾಗಿ ಅವರು ನುಡಿದರು

oo

ದಕ್ಷಿಣ ನೇಪಾಳದ ಭಂಕಪುರದಲ್ಲಿ ಪರಿಸ್ಥಿತಿಯನ್ನು ನೇಪಾಳ ಸೇನೆ ಹತೋಟಿಗೆ ತಂದಿದೆ ಎಂದು ಗೃಹಮಂತ್ರಿ ಡಾ|| ತುಳಸೀಗಿರಿ ಹೇಳಿರುವದನ್ನು ಖಂಡಿಸಿ ನೇಪಾಳದಲ್ಲಿ ನಿರೀಕ್ಷಿಕರು ಸಂಶಯದಿಂದ ಕಾಣುತ್ತಿರುವರು

o

ವಿಶ್ವಸಂಸ್ಥೆ ಹಾಗೂ ಕಟಾಂಗ ಸೇನೆಗಳಲ್ಲಿ ಸೇವಾದಳ ಹೊಡೆದಾಟವಾಗುವ ಭಯ ವಿದೆಯೆಂದು ಲಂಡನ್ನಿನ ಸಂಡೆ ಟೈಮ್ಸ್ ಪ್ರಕಟಿಸಿದೆ

★

ಭಾರತದ ಉಪ ವಿದೇಶ ಮಂತ್ರಿ ಶ್ರೀಮತಿ ಲಕ್ಷ್ಮೀ ಮೆನನ್, ಅಲಹಾಬಾದಿನಲ್ಲಿ ಭಾಷಣಮಾಡುತ್ತಾ, ಭಾರತದ ವಿದೇಶ ನೀತಿ ಶಾಸ್ತ್ರದ ಅಧಾರದ ವೇಲೆ ಇದೆ ಎಂದರು.

oo

ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸು ವಾಮಪಕ್ಷಗಳ ಪ್ರಬಲ ವಿರೋಧ ಎದುರಿಸಬೇಕಾಗಿದೆ.

ನಾಳೆಯ ಪಂಚಾಂಗ

ಅಸ್ಮಾನ ವ ಹಾವಿದರ್ವಾ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪಕ್ಕಯ್ಯನ್ನ ಜೋಯಿಸರಿಂದ

14 ದಶಮಿ ಮೃಗಶಿರ

oo

ಮೊನ್ನೆ ಅಲ್ಜೀರಿಯಾ ಗಲಭೆಯಲ್ಲಿ 12 ಮಂದಿ ಸತ್ತರು

oo

ದಕ್ಷಿಣ ಆಫ್ರಿಕಾ ವಸ್ತುಗಳಿಗೆ ಅಂತರ್ ಗಣಂತ್ರ್ಯ ನಿಷೇಧಮಾಡಿದೆ.

ಮಾರ್ಚ್ ತಿಂಗಳಿಗೆ

ರಾಜ್ಯ ಸರ್ಕಾರದ ನೌಕರರಿಗೆ ಬಾಡಿಗೆ ಮನೆ ಯೋಜನೆಯನ್ನು ಜಾರಿಗೆ ತರಲು ಭಾರತ ಸರ್ಕಾರ ಇನ್ನೊಂದು ರಾಜ್ಯಗಳಿಗೆ ರೂ 2 ಕೋಟಿ ಸಾಲವನ್ನು ಮಂಜೂರು ಮಾಡಿದೆ.

ಂ ಂ

ವರ್ಷ ಗ್ರಾಮದಲ್ಲಿ ಭಾರತ ಪೋಲೀಸರಿಗೂ ಪಾಕಿಸ್ತಾನದ ಅಕ್ರಮ ಸಾಗಾಣಿಕೆಗಾರರಿಗೂ ಮೊನ್ನೆ ಕದನವಾಗಿ ಪೂರ್ವ ಪಾಕಿಸ್ತಾನದವನ್ನು ಮಂಡಣ ಹೊಂದಿದನು. 6 ಮಂದಿ ಪಾಕಿಸ್ತಾನ ಪ್ರದೇಶಕ್ಕೆ ಓಡಿದರು.

ಂ ಂ

ಮೊನ್ನೆ ಪುಣೆಯಲ್ಲಿ ಪ್ರಧಾನಿ ಪಂ|| ನೆಹರು ವ್ಯೂಹನಾಡುತ್ತಾ, ಅಪ ಗ್ರಹದಿಂದ ಏನೂ ಆಗಲಿಲ್ಲ, ಕೆಲವರಿಗೆ ವಾತ್ಸ್ಯ ಲಾಭವಾಯಿತು ಎಂದರು ಜ್ಯೋತಿಷ್ಯರ ಬಳಿಗೆ ಹೋಗುವ ಕಾಂಗ್ರೆಸಿಗರೂ ಇದ್ದಾರೆ, ಇವೆಲ್ಲ ಮೂಢ ನಂಬಿಕೆ, ಜನ ಎಚ್ಚರಿಂದ ಇರಬೇಕು ಎಂದರು.

ಂ ಂ

ಮಧ್ಯ ಪ್ರದೇಶದಿಂದ ಲೋಕಸಭೆ ಚುನಾವಣೆಗೆ ಹತ್ತು ವಿಧಾನಸಭೆ ಚುನಾವಣೆಗೆ ಹನ್ನೊಂದು ರಾಜಂತಾಣಿಯರುಗಳು ಹಾಗೂ ಮೂರು ಮಹಾರಾಣಿಯರು ಸ್ಪರ್ಧಿಸಿರುವರು 7 ಮಂದಿ ಕಾಂಗ್ರೆಸು ಟಿಕೇಟಿನ ಮೇಲೆ ಸ್ಪರ್ಧಿಸಿರುವರು 3 ಮಹಾರಾಜರು ರಾಮರಾಜ್ಯ ಪರಿಷತ್ತಿನ ಟಿಕೇಟು ಮೇಲೆ ಸ್ಪರ್ಧಿಸಿರುವರು 3 ಮಂದಿ ಸ್ವತಂತ್ರವಾಗಿ ಸ್ಪರ್ಧಿಸಿರುವರು.

ಂ ಂ

ಉತ್ತರ ಸೈಬೀರಿಯಾದ ಅಧ್ಯಕ್ಷರುಗಳು ದೂರು ಮಾಡಿ ಪಕ್ಕದ ಚಾಡ್ ಗಣರಾಜ್ಯದಿಂದ ಇನ್ನೂರು ಅನೆಗಳು ಬಂದು ಬೆಳೆ ನಾಶ ಮಾಡಿವೆ ಎಂದು ತಿಳಿಸಿದ್ದಾರೆ.

ಂ ಂ

ಪಾಕಿಸ್ತಾನದ ವಿದ್ಯಾರ್ಥಿಗಳ ಚಳುವಳಿ ಸಿಲ್ಹೆಟ್‌ಗೆ ಹರಡಿದೆ.

ಂ ಂ

ಸಾಲ್ವಾದಲ್ಲಿನ ಟ್ಯಾಕ್ಸಿನ್ ಬಂದೀಖಾನೆಯೊಡೆದು ಬಂದಿಗಳನ್ನು ಹೊಗ ತರುವ ನಾಯಕತ್ವ ವಹಿಸಿದ ಕಮ್ಯೂನಿಸ್ಟರಾದ ಶ್ರೀ ಕಮಲಾರಾಜ ರೆಜಿನಿ ಭಾರ ತಕ್ಕೆ ಪರಾರಿ ಆದರೆಂದು ಖಟ್ಟಮಂಡು ವಾರ್ತೆ

ಂ ಂ

ಭಂತಪ್ರಾಂತದಲ್ಲಿ ದಂಗೆಕೋರರು ಹಾಗೂ ಪೋಲೀಸರ ಹೊಡೆದಾಟ ಹ ತ್ತೋಟಿಯಲ್ಲಿದೆಯೆಂದೂ ಭಾರತ ಗಡಿಯ ಹತ್ತಿರಕ್ಕೆ ನುಗ್ಗಿ ಮತ್ತು ತೋಗೆ ಅವ ರನ್ನು ಸೇನಿಕರು ಅಟ್ಟಿಕೊಂಡು ಹೋಗುತ್ತಿರುವರೆಂದು ನೇಪಾಳ ಗೃಹವಂತ್ರಿ ಹಾ|| ತುಳಸೀಗಿರಿ ಖಟ್ಟಮಂಡುವಿನಲ್ಲಿ ನುಡಿದರು.

ಮೈಸೂರುನಗರ (ದಕ್ಷಿಣ) ಕ್ಷೇತ್ರದಿಂದ ವಿಧಾನಸಭೆ ಚುನಾವಣೆ

— 25-2-62 —

ನಿಮ್ಮ ಪವಿತ್ರವಾದ ಓಟನ್ನು ಸ್ವತಂತ್ರ ಪಕ್ಷದ

ಡಾ|| ಎನ್. ಎಸ್. ನಾರಾಯಣರಾವ್

ಅವರಿಗೆ ಕೊಡಬೇಕಾಗಿ ವಿನಂತಿ — ಅವರ ಸೀರಿಯಲ್ ನಂ 3

ಅವರ ಗುರುತು ನಕ್ಷತ್ರದ ಮುಂದೆ

ನ ಕ್ಷ ತ್ರ X ಹೀಗೆ ಸೀಲ್ ಹಾಕಿ

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.

ವುಡ್‌ಲ್ಯಾಂಡ್ 9—2—62 ರಿಂದ
ಶಿ ನ್ ಅಮೋಘ ಆರಂಭ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆ
ಸಂಗೀತ— ಶಂಕರ್-ಜೈಕಿಶನ್ [ದಿನವಹಿ 4 ಪ್ರದರ್ಶನಗಳು]

ಅಪೆರಾ — ಜಯಪ್ರದ 2 ನೇ ವಾರ

ಭೂಕೈಲಾಸ (ಕನ್ನಡ)

ತಾರಾಗಣ— ರಾಜಕುಮಾರ್, ಜಮುನ, ಇ ವಿ ಸರೋಜ, ರಂಗರಾವ್
ಕಮಲಾ ಲಕ್ಷ್ಮಣ್, ಗೋಪಿ ಕೃಷ್ಣ [ದಿನವಹಿ 3 ಆಟಗಳು]

SHAKTI SUDHA

★

A Superb Tonic



ಮದರಾಸಿಗೆ ಪವಿಸಾದಲ್ಲಿರುವ ಗಿಂಡಿ ಕೈಗಾರಿಕಾ ಪ್ರದೇಶದಲ್ಲಿರುವ ಸೇವಾ ಕೇಂದ್ರವೊಂದರಲ್ಲಿ ಕಸ್ಸೆ ಕಟ್ಟುವ ಯಂತ್ರ ವ್ರ ಕೆಲಸ ಮಾಡುತ್ತಿರುವದನ್ನು ಚಿತ್ರದಲ್ಲಿ ಕಾಣಬಹುದು.